| Phone: 91- 080-23330984/149<br>Telefax: 91- 080-23330984 | आज़ादी का अमृत महोत्सव | Website :www.uasbangalore.edu.in<br>Email :registrar@uasbangalore.edu.in |
|---|---|---|

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕುಲಸಚಿವರ ಕಛೇರಿ, ಜಿ.ಕೆ.ವಿ.ಕೆ. ಬೆಂಗಳೂರು–560065, ಕರ್ನಾಟಕ

**UNIVERSITY OF AGRICULTURAL SCIENCES, BANGALORE**

Office of the Registrar, GKVK Campus, Bengaluru– 560065, Karnataka

ಸಂಖ್ಯೆ:ಕು.ಸ/ಸಕು/ಹಿ.ಕ್ಷೇ.ಸ/ದೂ.ಶಿ.ಘ/ಯಂತ್ರೋಪಕರಣ/2022–23 ದಿನಾಂಕ:29.08.2022

## ಅಧಿಸೂಚನೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2022–23 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿಸ್ತರಣಾ ನಿರ್ದೇಶನಾಲಯದ ದೂರ ಶಿಕ್ಷಣ ಘಟಕದ ಮುಖಾಂತರ "ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಿದೆ

## ದೂರಶಿಕ್ಷಣ ಕೋರ್ಸ್‌ನ ವಿವರ

| ಕೋರ್ಸ್‌ನ ಹೆಸರು | ಕೋರ್ಸ್‌ನ ಅವಧಿ | ಅರ್ಜಿ ಶುಲ್ಕ (ರೂ.) | ಕೋರ್ಸ್ ಶುಲ್ಕ (ರೂ.) | ಅರ್ಜಿ ದೊರೆಯುವ ವಿಳಾಸ | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ವಿಳಾಸ | ವಿದ್ಯಾರ್ಹತೆ | ಬೋಧನಾ ಮಾಧ್ಯಮ |
|---|---|---|---|---|---|---|---|
| ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್ | ಒಂದು ವರ್ಷ (2 ಸೆಮಿಸ್ಟರ್‌ಗಳು) | 100/- | 3000/- | ದೂರ ಶಿಕ್ಷಣ ಘಟಕ ಜಿಕೆವಿಕೆ ಬೆಂಗಳೂರು ಅಥವಾ **Download from** (www.uasbangalore.edu.in | ದೂರ ಶಿಕ್ಷಣ ಘಟಕ, ಜಿಕೆವಿಕೆ ಬೆಂಗಳೂರು | ಎಸ್.ಎಸ್.ಎಲ್.ಸಿ | ಕನ್ನಡ |

ನಿಗದಿತ ಅರ್ಜಿ ಶುಲ್ಕವನ್ನು ಡಿ.ಡಿ.ಮೂಲಕ **Comptroller, UAS, GKVK, Bengaluru** ಇವರ ಹೆಸರಿನಲ್ಲಿ ಪಡೆಯತಕ್ಕದ್ದು. ಅರ್ಜಿಗಳನ್ನು ಮೇಲೆ ತಿಳಿಸಿದ ವಿಳಾಸದಲ್ಲಿ ದಿನಾಂಕ:29.08.2022 ರಿಂದ 27.09.2022 ರವರೆಗೆ ಪಡೆಯಬಹುದು ಅಥವಾ ವೆಬ್‌ಸೈಟ್‌ನಲ್ಲಿಯು ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ.**28.09.2022 ಸಂಜೆ 04.00 ಗಂಟೆ ಒಳಗೆ** ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ www.uasbangalore.edu.in ನಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 080–23636353 ಸಂಪರ್ಕಿಸತಕ್ಕದ್ದು.

ಕೃ.ವಿ.ವಿ. ಜಿ.ಕೆ.ವಿ.ಕೆ ಕುಲಸಚಿವರು ಬೆಂಗಳೂರು - 560 065

ಆದೇಶದ ಮೇರೆಗೆ,

ಕುಲಸಚಿವರು

**ಪ್ರತಿಗಳು:**

1. ಶಿಕ್ಷಣ ನಿರ್ದೇಶಕರು ಕೃಷಿ ವಿಶ್ವವಿದ್ಯಾನಿಲಯಜಿ.ಕೆವಿಕೆ. ಬೆಂಗಳೂರು– ಮಾಹಿತಿಗಾಗಿ
2. ವಿಸ್ತರಣಾ ನಿರ್ದೇಶಕರು ಕೃಷಿ ವಿಶ್ವವಿದ್ಯಾನಿಲಯಜಿ.ಕೆ.ವಿ.ಕೆ., ಬೆಂಗಳೂರು – ಸೂಕ್ತ ಕ್ರಮಕ್ಕಾಗಿ
3. ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣಾ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃ.ವಿ.ವಿ. ಜಿ.ಕೆ.ವಿ.ಕೆ., ಬೆಂಗಳೂರು– ಸೂಕ್ತ ಕ್ರಮಕ್ಕಾಗಿ
4. ಸಹಾಯಕ ಕುಲಸಚಿವರು , ಕುಲಸಚಿವರ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು
5. ಆಪ್ತ ಕಾರ್ಯದರ್ಶಿಗಳು ಕುಲಪತಿಗಳರವರ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು–ಮಾಹಿತಿಗಾಗಿ

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ದೂರ ಶಿಕ್ಷಣ ಘಟಕ

## ವಿಸ್ತರಣಾ ನಿರ್ದೇಶನಾಲಯ

# ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್

## ದೂರ ಶಿಕ್ಷಣ ವಿವರಣಾ ಕೈಪಿಡಿ

## 2022–23



**2022**

**Website: www.uasbangalore.edu.in**
**ದೂರವಾಣಿ ಸಂಖ್ಯೆ: 080–23636353**

## ಪರಿವಿಡಿ


| ಕ್ರಸಂ | ವಿಷಯ | ಪುಟಸಂಖ್ಯೆ |
|---|---|---|
| 1. | ಕೃಷಿ ವಿಶ್ವವಿದ್ಯಾನಿಲಯದ ಪರಿಚಯ | 3 |
| 2. | ಉದ್ದೇಶಗಳು | 3 |
| 3. | ವಿಶಿಷ್ಟ ಲಕ್ಷಣಗಳು | 3 |
| 4. | ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಕೋರ್ಸ್ ವಿವರ | 4 |
| 5. | ಬೋಧನಾ ಮಾಧ್ಯಮ | 4 |
| 6. | ಅರ್ಹತೆ, ಅವಧಿ ಮತ್ತು ಶುಲ್ಕಗಳ ವಿವರ | 4 |
| 7. | ಸಂಪರ್ಕ ತರಗತಿ | 4 |
| 8. | ಸರ್ಟಿಫಿಕೇಟ್ ಕೋರ್ಸ್ ಗರಿಷ್ಠ ಅವಧಿ | 4 |
| 9. | ಭೋದನಾ ವಿಧಾನ | 5 |
| 10. | ಸಮಾಲೋಚನಾ ಕಾರ್ಯಕ್ರಮ | 5 |
| 11. | ಮೌಲ್ಯಮಾಪನ | 5 |
| 12. | ಪ್ರವೇಶಾತಿ ಮಾಹಿತಿ | 6 |
| 13. | ಫಲಿತಾಂಶ ಘೋಷಣೆ | 6 |
| 14. | ಅರ್ಜಿ ವಿತರಣೆ ವಿವರ | 6 |
| 15. | ಅರ್ಜಿ ಪಡೆಯುವ ವಿಧಾನ | 6 |
| 16. | ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು | 6 |

## 1. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–ಪರಿಚಯ

ಕೃಷಿ ವಿಶ್ವವಿದ್ಯಾನಿಲಯವನ್ನು 1964 ರಲ್ಲಿ ಕೃಷಿ ಸಂಬಂಧಿತ ವಿಜ್ಞಾನದ ಬೆಳವಣಿಗೆಗಾಗಿ ಸ್ಥಾಪಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಮುಖ್ಯ ಧ್ಯೇಯ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳಲ್ಲಿ ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಸೇವೆಯಲ್ಲಿ ಅತ್ಯುನ್ನತ ಮಟ್ಟವನ್ನು ಮುಟ್ಟುವುದು. ಈ ವಿಶ್ವವಿದ್ಯಾನಿಲಯವು ಕೃಷಿ ಸಂಬಂಧಿತ ಹೊಸ ಹೊಸ ವಿಷಯಗಳು ಹಾಗೂ ಸಮಕಾಲೀನ ಅಭಿವೃದ್ಧಿಯ ಬಗ್ಗೆ ವೈಜ್ಞಾನಿಕ ಮತ್ತು ತಾಂತ್ರಿಕವಾಗಿ ಪ್ರಯತ್ನ ಮಾಡುತ್ತಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2001 ಮತ್ತು 2012 ರಲ್ಲಿ ಕೃಷಿ ಸಂಬಂಧ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳಿಗಾಗಿ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನಿಂದ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಕೃಷಿ ವಿಶ್ವವಿದ್ಯಾನಿಲಯವೆಂದು ಗುರುತಿಸಲ್ಪಟ್ಟು ಸರ್ದಾರ್ ಪಟೇಲ್ ಔಟ್‌ಸ್ಟ್ಯಾಂಡಿಂಗ್ ಐ.ಸಿ.ಎ.ಆರ್., ಇನ್ಸ್ಟಿಟ್ಯೂಶನ್ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತದೆ. ಅಲ್ಲದೆ, 2002, 2003, 2005, 2013, 2015, 2016, 2017 ಮತ್ತು 2018ರ ಸಾಲಿನಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಶೋಧನಾ ಶಿಷ್ಯವೇತನ ನೀಡುವ ಸಲುವಾಗಿ ನಡೆಸಿದ ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಹಾಗೆಯೇ 2021ರಲ್ಲಿ 6ನೇ ಸ್ಥಾನವನ್ನು ಪಡೆದುಕೊಂಡಿದೆ.

ಕೃಷಿ ತಂತ್ರಜ್ಞಾನದ ಹೊಸ ಅವಿಷ್ಕಾರಗಳನ್ನು ದೂರ ಶಿಕ್ಷಣದ ಮೂಲಕ ರಾಜ್ಯದ ಕೃಷಿಕರಿಗೆ ಮುಟ್ಟಿಸುವ ಸಲುವಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭಿಸಿದೆ. ಈ ದೂರ ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಿರುವ ಉದ್ದೇಶಗಳು ಕೆಳಕಂಡಂತಿವೆ.

## 2. ಉದ್ದೇಶಗಳು

1 ಕೃಷಿ ತಾಂತ್ರಿಕತೆಗಳನ್ನು ರೈತರಿಗೆ (ಗ್ರಾಮೀಣ ಯುವ ಜನಾಂಗಕ್ಕೆ ಮತ್ತು ಇತರೆ ಆಸಕ್ತರಿಗೆ) ದೂರ ಶಿಕ್ಷಣದ ಮೂಲಕ ತಲುಪಿಸುವುದು.

2 ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಶಾಲಾ/ಕಾಲೇಜು ವ್ಯಾಸಂಗ ವಂಚಿತರಾದವರಲ್ಲಿ ಕೃಷಿಯ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು.

3 ಶಿಕ್ಷಣವನ್ನು ಪೂರೈಸದೇ ಅರ್ಧದಲ್ಲಿ ಬಿಟ್ಟಿರುವ ಕಲಿಕಾರ್ಥಿಗಳಿಗೆ ಕೃಷಿ ಶಿಕ್ಷಣ ಮುಂದುವರೆಸಲು ಅವಕಾಶಗಳನ್ನು ಒದಗಿಸುವುದು.

4 ಕಾರ್ಯನಿರತ ಉದ್ಯೋಗಿಗಳಿಗೆ ಉನ್ನತ ಕೃಷಿ ಜ್ಞಾನವನ್ನು ವೃದ್ಧಿಸಿಕೊಳ್ಳಲು ಅವಕಾಶವನ್ನು ಒದಗಿಸುವುದು ಮತ್ತು

5 ಕೃಷಿಯಲ್ಲಿ ದೂರ ಶಿಕ್ಷಣಕ್ಕೆ ಉತ್ತೇಜನ ನೀಡುವುದು.

## 3. ವಿಶಿಷ್ಟ ಲಕ್ಷಣಗಳು

ದೂರ ಶಿಕ್ಷಣ ಕಲಿಕಾ ವ್ಯವಸ್ಥೆಯು ಸವಾಲುಳ್ಳದ್ದು ಆಗಿದೆ. ಏಕೆಂದರೆ ದೂರ ಶಿಕ್ಷಣ ಕಲಿಕಾ ಕ್ರಮಕ್ಕೆ ಸೇರ್ಪಡೆಯಾಗಿರುವ ಕಲಿಕಾರ್ಥಿಗಳು ವಿವಿಧ ಬಗೆಯ ಸಾಮಾಜಿಕ, ಆರ್ಥಿಕ ಹಿನ್ನಲೆಯೊಂದಿಗೆ ಹಾಗೂ ವಿಭಿನ್ನ ಕಲಿಕಾ ಹಿನ್ನಲೆಯನ್ನು ಹೊಂದಿರುವವರಾಗಿರುತ್ತಾರೆ. ಪ್ರಸ್ತುತ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಅಭ್ಯರ್ಥಿಗಳ ನೈಜ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಹಾಗೂ ಇಂತಹ ಅಭ್ಯರ್ಥಿಗಳು ಹಲವಾರು ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸಲು ಸಾಧ್ಯವಾಗುತ್ತಿಲ್ಲ ಹೀಗಾಗಿ ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾಗಿರುವ ಅಭ್ಯರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಒದಗಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯವೆಂದರೆ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದೇ ಆಗಿದೆ. ಹೀಗಾಗಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಶಿಕ್ಷಣ ನೀಡಲಾಗುತ್ತಿದೆ.

- ಅನೂಕೂಲಕರ ರೀತಿಯಲ್ಲಿ ಸ್ವತಃ ವ್ಯಾಸಂಗ ಮಾಡುವುದು.
- ನವ್ಯ ಪಠ್ಯ ಮಾದರಿ.
- ಮುದ್ರಿತ ಮಾರ್ಗದರ್ಶಿ ಒದಗಿಸುವುದು.
- ಅಭ್ಯರ್ಥಿಗಳು ನುರಿತ ವಿಷಯ ತಜ್ಞರೊಂದಿಗೆ ಕೃಷಿ ಶಿಕ್ಷಣವನ್ನು ಪಡೆಯಲು ಅವಕಾಶ ಒದಗಿಸುವುದು.

**4. ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಕೋರ್ಸ್ ವಿವರ**

ಕೃಷಿ ಯಂತ್ರೋಪಕರಣಗಳ ನಿರ್ವಹಣೆ ವಿಷಯಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರಗೊಳ್ಳುತ್ತಿದ್ದು ಹಳ್ಳಿಗಳಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಜನರಿಗೆ ಸರ್ಟಿಫಿಕೇಟ್ ಕೋರ್ಸ್ ಮುಖಾಂತರ ತಾಂತ್ರಿಕ ಮಾಹಿತಿ ದೊರೆತಾಗ ಅವರು ಸ್ವಯಂ ಉದ್ಯೋಗಸ್ಥರಾಗಲು ಸಹಾಯವಾಗುತ್ತದೆ. ಈ ಅವಕಾಶಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಲು ಸರ್ಟಿಫಿಕೇಟ್ ಕೋರ್ಸ್ ಒಂದು ಸೂಕ್ತ ಮಾರ್ಗದರ್ಶನವಾಗಲಿದೆ.

ಈ ಕೋರ್ಸ್‌ನಲ್ಲಿ ಕೃಷಿ ಯಾಂತ್ರೀಕರಣ ಪರಿಚಯ ಮತ್ತು ಕೃಷಿ ಶಕ್ತಿಯ ಮೂಲಗಳು, ಇಂಜಿನ್, ಟ್ರ್ಯಾಕ್ಟರ್ ಮತ್ತು ಪವರ್ ಟಿಲ್ಲರ್ ನಿರ್ವಹಣೆ, ಭೂಮಿಯನ್ನು ಹದ ಮಾಡುವ ಉಪಕರಣಗಳು, ಬಿತ್ತನೆ ಉಪಕರಣಗಳು, ಕಳೆ ತೆಗೆಯುವ ಹಾಗೂ ಅಂತರ ಬೇಸಾಯದ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಕೊಯ್ಲು ಮಾಡುವ ಯಂತ್ರ/ ಬೆಳೆ ಕಟಾವು ಯಂತ್ರಗಳು, ಒಕ್ಕಣೆ ಮಾಡುವ ಯಂತ್ರಗಳು, ಇತರೆ ಉಪಕರಣಗಳು – ಚಾಫ್ ಕಟ್ಟರ್ ಆಗರ್ ಡಿಗ್ಗರ್, ನೀರಾವರಿ ಪಂಪುಗಳು ಮತ್ತು ಎಲೆಕ್ಟ್ರಿಕ್ ಮೋಟಾರ್‌ಗಳು, ಹಸಿರುಮನೆ ಮತ್ತು ಹನಿ ನಿರಾವರಿ ವ್ಯವಸ್ಥೆಯ ನಿರ್ವಹಣೆ ಮತ್ತು ಯಂತ್ರೋಪಕರಣಗಳ ಪಟ್ಟಿ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.

**5. ಬೋಧನೆಯ ಮಾಧ್ಯಮ: ಕನ್ನಡ**

**6. ಅರ್ಹತೆ, ಅವಧಿ, ಮತ್ತು ಶುಲ್ಕಗಳ ವಿವರ**

- **ಕೋರ್ಸ್** : ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್
- **ಅರ್ಹತೆ** : ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಪ್ರೌಢಶಾಲೆಯಿಂದ ಹತ್ತನೇ ತರಗತಿ ಪಾಸಾಗಿರಬೇಕು
- **ಅವಧಿ** : ಒಂದು ವರ್ಷ
- **ಶುಲ್ಕ** : 3000–00 (ರೂಪಾಯಿ ಮೂರು ಸಾವಿರ ಮಾತ್ರ)

**7. ಸಂಪರ್ಕ ತರಗತಿ**

ಕೃಷಿ ಇಂಜನೀಯರಿಂಗ್ ಮಹಾವಿದ್ಯಾಲಯ ಬೆಂಗಳೂರಿನಲ್ಲಿ ಸಂಪರ್ಕ ತರಗತಿಗಳನ್ನು ಅಯೋಜಿಸಲಾಗುವುದು. ಅಭ್ಯರ್ಥಿಗಳಿಗೆ ನುರಿತ ತಜ್ಞರೊಂದಿಗೆ ಮುಖಾಮುಖಿ ವಿಚಾರಗಳನ್ನು ಚರ್ಚೆಮಾಡಿ ಈ ಕೋರ್ಸ್‌ಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಎಲ್ಲಾ ವಿಚಾರವನ್ನು ಅರ್ಥೈಸಿಕೊಳ್ಳಲು ಅವಕಾಶವಿರುತ್ತದೆ. ಈ ಕೋರ್ಸಗೆ 12 ದಿನಗಳು ಸಂಪರ್ಕ ತರಗತಿಗಳಿಗೆ ಹಾಜರಾಗಬೇಕು. ಈ ಕೋರ್ಸ್‌ಗಳಿಗೆ ನೊಂದಾಯಿಸಿದ ಅಭ್ಯರ್ಥಿಗಳಿಗೆ ಹಾಜರಾತಿ ಕಡ್ಡಾಯವಾಗಿರುತ್ತದೆ. **ಈ ತರಗತಿಗಳಿಗೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹೋಗಬೇಕು. ಈ ಅವಧಿಯಲ್ಲಿ ಯಾವುದೇ ಉಚಿತ ವಸತಿ/ ಇತರೆ ಸೌಲಭ್ಯಗಳಿರುವುದಿಲ್ಲ.**

**8. ಸರ್ಟಿಫಿಕೇಟ್ ಕೋರ್ಸ್ ಪೂರ್ಣಗೊಳಿಸಲು ಗರಿಷ್ಠ ಅವಧಿ**

ಅಭ್ಯರ್ಥಿಯು ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್‌ನ್ನು ವಿಶ್ವವಿದ್ಯಾನಿಲಯವು ನಿಗದಿ ಪಡಿಸಿದ ಸಮಯದಲ್ಲಿ ಪೂರ್ಣಗೊಳಿಸಬೇಕು. ಆದಾಗ್ಯೂ ಒಬ್ಬ ಅಭ್ಯರ್ಥಿ ಬೇರೆ ಬೇರೆ ಕಾರಣಗಳಿಂದಾಗಿ ನಿಗದಿತ ಅವಧಿಯಲ್ಲಿ ಕೋರ್ಸ್‌ನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ಅಂತಹವರಿಗೆ ನಿಗದಿತ ಅವಧಿಗಿಂತ ಒಂದು ವರ್ಷ ಹೆಚ್ಚಿನ ಸಮಯಾವಕಾಶವನ್ನು ನೀಡಲಾಗುವುದು. ಇದರ ಸಾಮಾನ್ಯ ಸಮೀಕರಣವೆಂದರೆ N+1 ವರ್ಷಗಳು (N= ಶಿಕ್ಷಣ ಕ್ರಮವನ್ನು ಪೂರ್ಣಗೊಳಿಸಲು ನೀಡಿರುವ ಕನಿಷ್ಠ / ಸಾಮಾನ್ಯ ಅವಧಿ).

## 9. ಬೋಧನಾ ವಿಧಾನ

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಇರುವುದಕ್ಕಿಂತ ಭಿನ್ನವಾದ ಬೋಧನಾ ವಿಧಾನ ನಮ್ಮ ವಿಶ್ವವಿದ್ಯಾನಿಲಯದಲ್ಲಿದೆ. ಈ ಬೋಧನಾ ವ್ಯವಸ್ಥೆ ಕಲಿಕಾರ್ಥಿ ಆಧಾರಿತವಾಗಿದ್ದು, ಅಭ್ಯರ್ಥಿಯು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅಗತ್ಯ ಪ್ರೇರಣೆಯನ್ನು ಒದಗಿಸುತ್ತದೆ. ಅಭ್ಯರ್ಥಿಗಳಿಗೆ ಬೋಧನೆಯನ್ನು ವಿವಿಧ ಕ್ರಮಗಳ ಮುಖಾಂತರ ನೀಡಲಾಗುತ್ತದೆ. ಅವುಗಳೆಂದರೆ ಮುದ್ರಿತ ಸಾಮಗ್ರಿ, ಸಮಾಲೋಚನೆ ಕಾರ್ಯದಲ್ಲಿ ಮುಖಾಮುಖಿ ಸಂವಹನ ನಡೆಸಲಾಗುತ್ತದೆ.

ಅಧ್ಯಯನ ಸಾಮಗ್ರಿಯನ್ನು ಕಲಿಕಾರ್ಥಿಯ ಹಿನ್ನಲೆ, ಅಧ್ಯಯನ ಮಟ್ಟ ಇವುಗಳನ್ನು ಆಧರಿಸಿ ರಚಿಸಲಾಗಿದೆ. ವಿವಿಧ ಶಿಕ್ಷಣ ಕ್ರಮದ ಅಗತ್ಯತೆಯನ್ನು ಪೂರೈಸಿಕೊಳ್ಳಲು ಅಧ್ಯಯನ ಸಾಮಗ್ರಿ ಪ್ರಾಥಮಿಕ ಮೂಲದ ಮಾಹಿತಿಯಾಗಿದೆ. ಅಭ್ಯರ್ಥಿಗಳಿಗೆ ಅಧ್ಯಯನ ಸಾಮಗ್ರಿಯನ್ನು ಅಂಚೆ ಮೂಲಕ ಅಭ್ಯರ್ಥಿಯ ವಿಳಾಸಕ್ಕೆ ಕಳುಹಿಸಲಾಗುವುದು.

## 10. ಸಮಾಲೋಚನಾ ಕಾರ್ಯಕ್ರಮ

ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯವು ಸಮಾಲೋಚನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಇದು ಕಲಿಕಾರ್ಥಿ ಮತ್ತು ಸಮಾಲೋಚಕರು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಲು ಅವಕಾಶ ಒದಗಿಸುತ್ತದೆ. ಇಂತಹ ಸಮಾಲೋಚನೆಯ ಉದ್ದೇಶವೆಂದರೆ ಅಭ್ಯರ್ಥಿಗಳಿಗೆ ಎದುರಾಗುವ ಕೆಲವು ಸಮಸ್ಯೆಗಳಿಗೆ ಪರಿಣಿತ ಸಮಾಲೋಚಕರಿಂದ ಸ್ಪಷ್ಟೀಕರಣ ದೊರಕಿಸಿಕೊಡುವುದೇ ಆಗಿದೆ.

ಸಮಾಲೋಚನಾ ಕಾರ್ಯಕ್ರಮವನ್ನು ಅಧ್ಯಯನ ಕೇಂದ್ರವಾದ ಕೃಷಿ ಇಂಜನೀಯರಿಂಗ್ ಮಹಾವಿದ್ಯಾಲಯ, ಕೃವಿವಿ, ಜಿಕೆವಿಕೆ, ಬೆಂಗಳೂರಿನಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮದ ದಿನಾಂಕ, ಅವಧಿ ಇನ್ನಿತರೆ ಮಾಹಿತಿಯನ್ನು ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರು ಸುತ್ತೋಲೆಯ ಮೂಲಕ ತಿಳಿಸುವರು. ಅಭ್ಯರ್ಥಿಗಳು ವಿಷಯ ವಸ್ತುವನ್ನು ಅಭ್ಯಾಸ ಮಾಡುವಾಗ ಎದುರಾಗುವ ಕ್ಲಿಷ್ಟಕರ ಅಂಶಗಳು ಹಾಗೂ ಅವುಗಳನ್ನು ಪರಿಹರಿಸಿಕೊಳ್ಳುವ ಬಗ್ಗೆ ಸಮಾಲೋಚಕರು ಅಗತ್ಯ ಸಹಾಯ ಮಾಡುವರು. ಆದ್ದರಿಂದ, ಅಭ್ಯರ್ಥಿಗಳು ಸಮಾಲೋಚನಾ ಕಾರ್ಯಕ್ರಮಕ್ಕೆ ಬರುವ ಮುಂಚಿತವಾಗಿ ಸ್ವಯಂ ಕಲಿಕಾ ಸಾಮಗ್ರಿಯನ್ನು ಅಭ್ಯಾಸ ಮಾಡಿ, ಚರ್ಚೆ ಮಾಡಬೇಕಾದ ಅಂಶಗಳನ್ನು ಗುರುತಿಸಿಕೊಂಡು ಬರುವುದು ಕಡ್ಡಾಯವಾಗಿರುತ್ತದೆ.

## 11. ಮೌಲ್ಯಮಾಪನ

ಮೌಲ್ಯಮಾಪನವು ದೂರ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ, ಇದರ ಉದ್ದೇಶ ಅಧ್ಯಯನ ಸಾಮಾಗ್ರಿಗಳಿಂದ ಅಭ್ಯರ್ಥಿಗಳು ಎಷ್ಟರ ಮಟ್ಟಿಗೆ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವುದೇ ಆಗಿದೆ. ಅಧ್ಯಯನವನ್ನು ಹೇಗೆ ನಡೆಸುತ್ತಾರೆ ಎಂಬುದನ್ನು ತಿಳಿದುಕೊಂಡು ಅಭ್ಯರ್ಥಿಯ ಸಾಧನಾ ಮಟ್ಟವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಈ ಕೋರ್ಸ್‌ಗೆ ನಿಗದಿಪಡಿಸಿರುವ ಮೌಲ್ಯಮಾಪನ ರೀತಿಯನ್ನು ಸಂಪರ್ಕ ತರಗತಿಗಳ ಹಾಜರಾತಿ ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.

| ಅಂಕಗಳು (ಶೇ.) | ಶ್ರೇಣಿ |
|---|---|
| 60 ಮತ್ತು ಮೇಲ್ಪಟ್ಟು | ಪ್ರಥಮ ದರ್ಜೆ |
| 50–59.99 | ದ್ವಿತೀಯ ದರ್ಜೆ |
| 40–49.99 | ಉತ್ತೀರ್ಣ |
| 40 ರ ಕೆಳಪಟ್ಟು | ಅನುತ್ತೀರ್ಣ |

**12. ಪ್ರವೇಶಾತಿ ಮಾಹಿತಿ**

ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್ ಶುಲ್ಕವನ್ನು ರೂ.3000/- (ರೂಪಾಯಿ ಮೂರು ಸಾವಿರ ಮಾತ್ರ) ಡಿ.ಡಿ. ಮುಖಾಂತರ **Comptroller, UAS, GKVK, Bengaluru-560065** ಇವರ ಹೆಸರಿನಲ್ಲಿ ಡಿ.ಡಿ.ಯನ್ನು ತೆಗೆಯಬೇಕು.

- **ಅಧ್ಯಯನ ಕೇಂದ್ರ: ಕೃಷಿ ಇಂಜನೀಯರಿಂಗ್ ಮಹಾವಿದ್ಯಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560065**
- ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವ ಅಧಿಕಾರ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು

**13. ಫಲಿತಾಂಶ ಘೋಷಣೆ**

ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ 40 ಅಂಕಗಳನ್ನು ಪಡೆಯಬೇಕು. ಯಾವ ಅಭ್ಯರ್ಥಿಗಳು 40ಕ್ಕಿಂತ ಕಡಿಮೆ ಅಂಕಗಳನ್ನು ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ. ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ವಿಷಯಕ್ಕೆ ಮನಃ ಪರೀಕ್ಷೆಗೆ ಹಾಜರಾಗಬೇಕು.

ಎಲ್ಲಾ ತರಹದ ಸುತ್ತೋಲೆಗಳು, ಪರೀಕ್ಷಾ ಪ್ರಕಟಣೆಗಳು ಇನ್ನಿತರ ಪತ್ರ ವ್ಯವಹಾರಗಳನ್ನು ಸಾಮಾನ್ಯ ಅಂಚೆ ಮೂಲಕ ಅಭ್ಯರ್ಥಿಗಳಿಗೆ ರವಾನಿಸಲಾಗುವುದು. ಅರ್ಜಿ, ಸುತ್ತೋಲೆ, ಪ್ರಕಟಣೆ ಮತ್ತಿತರ ಮಾಹಿತಿಯನ್ನು ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃ.ವಿ.ವಿ., ಜಿಕೆವಿಕೆ. ಬೆಂಗಳೂರು-560065 ಇವರಿಂದ ಪಡೆಯಬಹುದಾಗಿದೆ.

**14. ಅರ್ಜಿ ವಿತರಣೆ ವಿವರ**

| ಕ್ರಸಂ | ಕೋರ್ಸ್ | ಅರ್ಜಿ ವಿತರಿಸುವ ದಿನಾಂಕ | ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| 1 | ಕೃಷಿ ಯಂತ್ರೋಪಕರಣಗಳ ನಿರ್ವಹಣೆ | 29-08-2022 ರಿಂದ 27-09-2022 | 28-09-2022 |

**15. ಅರ್ಜಿ ಪಡೆಯುವ ವಿಧಾನ**

ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿ ಶುಲ್ಕ **ರೂ 100/-** (ರೂ ಒಂದು ನೂರು ಮಾತ್ರ) ಪಾವತಿಸಬೇಕು. ಅರ್ಜಿ ಶುಲ್ಕವನ್ನು ನಗದು ಅಥವಾ ಪೋಸ್ಟಲ್ ಆರ್ಡರ್/ಡಿ.ಡಿ.ಯನ್ನು **Comptroller, UAS, Bangalore-560065** ಇವರ ಪರವಾಗಿ ಸಲ್ಲಿಸಿ, ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ. ಬೆಂಗಳೂರು-560065 ಇವರಿಂದ ಅರ್ಜಿ ಪಡೆಯಬಹುದು.

**ಅಥವಾ**

ಅಂಚೆಯ ಮೂಲಕ ಅರ್ಜಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಂತರ್ಜಾಲ www.uasbangalore.edu.in ದಿಂದ ಡೌನ್‌ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಗಳನ್ನು (ನಿಗದಿತ ಶುಲ್ಕದೊಡನೆ), ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560065 ಇವರಿಗೆ ಸಲ್ಲಿಸುವುದು.

**16. ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು**

1. ಅಭ್ಯರ್ಥಿಗಳು ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಂಡ ನಂತರವೇ ಅರ್ಜಿಯನ್ನು ಸಲ್ಲಿಸಬೇಕು
2. ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು ವಿವರಣಾ ಪುಸ್ತಕದಲ್ಲಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಬೇಕು
3. ವಿಶ್ವವಿದ್ಯಾನಿಲಯದ ಜಾಲತಾಣ/ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಅಧಿಕೃತ ಜಾಲತಾಣದಿಂದ (**http://www.uasbangalore.edu.in**) ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿ ಜೊತೆಯಲ್ಲಿ ಅರ್ಜಿ ಶುಲ್ಕ ಮತ್ತು ಕೋರ್ಸ್ ಶುಲ್ಕದ ಡಿ.ಡಿ.ಯನ್ನು ಲಗತ್ತಿಸಬೇಕು

4. ಅರ್ಜಿಯೊಂದಿಗೆ ಈ ಕೆಳಕಂಡ ದೃಢೀಕೃತ (Attested) ದಾಖಲಾತಿಗಳನ್ನು ಸಲ್ಲಿಸಬೇಕು
   - ಎಸ್.ಎಸ್.ಎಲ್.ಸಿ ಅಂಕಪಟ್ಟಿ
   - ಜಾತಿ ಮತ್ತು ಆದಾಯ ಪ್ರಮಾಣ ಪತ್ರ
   - ಆಧಾರ್ ಕಾರ್ಡ್
   - ಎರಡು ಪಾಸ್ ಪೋರ್ಟ್ ಅಳತೆಯ Photos ಅರ್ಜಿಯ ಜೊತೆ ಲಗತ್ತಿಸುವುದು
   - ವಿಕಲಚೇತನರಾಗಿದ್ದಾರೆ ಧೃಡೀಕೃತ ದಾಖಲಾತಿಯನ್ನು ಲಗತ್ತಿಸುವುದು
5. ಭರ್ತಿ ಮಾಡಿದ ಅರ್ಜಿಯನ್ನು ಕೋರ್ಸ್ ಶುಲ್ಕದ ಡಿಮಾಂಡ್ ಡ್ರಾಫ್ಟ್‌ನೊಂದಿಗೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560065 ರವರಿಗೆ ಸಲ್ಲಿಸುವುದು
6. ಅಭ್ಯರ್ಥಿಗಳು ಅಧ್ಯಯನ ಕೇಂದ್ರದ ಹೆಸರನ್ನು ಅರ್ಜಿಯಲ್ಲಿ ಬರೆಯತಕ್ಕದ್ದು
7. ವಿಶ್ವವಿದ್ಯಾನಿಲಯದ ಅನುಮೋದನೆ ನಂತರವೇ ಪ್ರವೇಶಾತಿಯು ಸಂಪೂರ್ಣಗೊಳ್ಳುತ್ತದೆ
8. ಅಭ್ಯರ್ಥಿಗಳು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸುವ ನಿಯಮ ನಿಬಂಧನೆಗಳನ್ನು ಪಾಲಿಸತಕ್ಕದ್ದು
9. ಅಭ್ಯರ್ಥಿಯು ತನ್ನ ವಯಸ್ಸು / ವಿದ್ಯಾರ್ಹತೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ನೀಡಿದರೆ ಅಥವಾ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷಣ ಕ್ರಮದಿಂದ ಹಾಗೂ ನೋಂದಣಿಯಿಂದ ಹೊರಗಿಡಲಾಗುವುದು ಹಾಗೂ ಕಾನೂನು ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು
10. ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು
11. ಎಲ್ಲಾ ನ್ಯಾಯ ವ್ಯಾಜ್ಯಗಳು ಬೆಂಗಳೂರು ನಗರ ನ್ಯಾಯಲಯಗಳ ವ್ಯಾಪ್ತಿಗೆ ಮಾತ್ರ ಬರುತ್ತದೆ
12. ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಒದಗಿಸಿರುವ ಮಾಹಿತಿ ಮತ್ತು ವಿವರಗಳೇ ಅಂತಿಮವಾದುದೆಂದು ಪರಿಗಣಿಸಲಾಗುವುದು.
13. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಸಲ್ಲಿಸುವ ಮೊದಲು ಅಭ್ಯರ್ಥಿಯು ಉಲ್ಲೇಖನಕ್ಕೆ/ ಅಥವಾ ಇತರೆ ಲಿಖಿತ ವ್ಯವಹಾರಕ್ಕೆ ಅರ್ಜಿ ನಮೂನೆಯ ಜೆರಾಕ್ಸ್ ಪ್ರತಿಯನ್ನು ತಮ್ಮಲ್ಲಿ ಹೊಂದಿರತಕ್ಕದ್ದು
14. ಸರ್ಕಾರಿ / ಖಾಸಗಿ ನೌಕರಿಯಲ್ಲಿರುವವರು ಅರ್ಜಿಗಳನ್ನು ತಮ್ಮ ಮೇಲಾಧಿಕಾರಿಗಳ ಮುಖಾಂತರ ಕಳುಹಿಸುವುದು ಕಡ್ಡಾಯವಾಗಿರುತ್ತದೆ
15. ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದು ಒಂದು ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು
16. ಅಭ್ಯರ್ಥಿಗಳು ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುವಂತಿರಬೇಕು

**ವಿಳಾಸ ಬದಲಾವಣೆ:** ಪ್ರವೇಶಾತಿ ಸಮಯದಲ್ಲಿ ಅಭ್ಯರ್ಥಿಯು ನೀಡಿದ್ದ ವಿಳಾಸವನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಅಭ್ಯರ್ಥಿಯೇ **ಸಂಯೋಜಕರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು 560065** ರವರಿಗೆ ಪತ್ರ ಬರೆದು ತಿಳಿಸಬೇಕು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ**

**ಸಂಯೋಜಕರು/ಮುಖ್ಯಸ್ಥರು**
ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ
ಕೃ.ವಿ.ವಿ., ಜಿಕೆವಿಕೆ, ಬೆಂಗಳೂರು-560065
ದೂರವಾಣಿ ಸಂಖ್ಯೆ: 080-23636353

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ

### *2022-23ನೇ ಸಾಲಿನ ದೂರ ಶಿಕ್ಷಣ ಕೋರ್ಸ್‌ಗೆ ಅರ್ಜಿ*

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

**ಅರ್ಜಿ ಸಂಖ್ಯೆ:**

*ಅರ್ಜಿಯನ್ನು ಕನ್ನಡ ಭಾಷೆಯಲ್ಲಿ ಮಾತ್ರ ಭರ್ತಿಮಾಡಬೇಕು*

| | | |
|---|---|---|
| 1. | ನೀವು ಸೇರಬಯಸುವ ಕೋರ್ಸ್‌ನ ಹೆಸರು | |
| 2. | ಅಭ್ಯರ್ಥಿಯ ಹೆಸರು (SSLC ಅಂಕಪಟ್ಟಿಯಲ್ಲಿರುವಂತೆ ಕನ್ನಡದಲ್ಲಿ ಬರೆಯಬೇಕು) | |
| 3. | ತಂದೆಯ ಹೆಸರು (SSLC ಅಂಕಪಟ್ಟಿಯಲ್ಲಿರುವಂತೆ ) | |
| 4. | ತಾಯಿಯ ಹೆಸರು (SSLC ಅಂಕಪಟ್ಟಿಯಲ್ಲಿರುವಂತೆ) | |
| 5. | ಹುಟ್ಟಿದ ದಿನಾಂಕ | |
| 6. | ಲಿಂಗ | ಸ್ತ್ರೀ / ಪುರುಷ / ತೃತೀಯ |
| 7. | ವಿವಾಹಿತರೆ ಅಥವಾ ಅವಿವಾಹಿತರೆ | |
| 8. | ಯಾವ ಜಾತಿ/ಪಂಗಡಕ್ಕೆ ಸೇರುತ್ತೀರಿ? | |
| 9. | ವಿದ್ಯಾಭ್ಯಾಸದ ಮಟ್ಟ | |
| 10. | ವಿಕಲಚೇತನರೆ | ಹೌದು / ಇಲ್ಲ |
| 11. | ಮೊಬೈಲ್ ಸಂಖ್ಯೆ (Whatsapp Number) | |
| 12. | ಸಂಪರ್ಕ ವಿಳಾಸ | |
| 13. | ಆಧಾರ್ ಸಂಖ್ಯೆ | |
| 14. | ಕೋರ್ಸ್ ಶುಲ್ಕದ ಡಿ.ಡಿ. ಸಂಖ್ಯೆ & ದಿನಾಂಕ | |
| 15. | ಅಧ್ಯಯನ ಕೇಂದ್ರದ ಹೆಸರು | |
| 16. | ವೃತ್ತಿ | ರೈತ / ಸರ್ಕಾರಿ ನೌಕರ / ನಿರುದ್ಯೋಗಿ / ಇತರೆ ________ |

17. ಸರ್ಕಾರಿ / ಅರೇ ಸರ್ಕಾರಿ ನೌಕರರಾದರೆ ಕೆಳಗಿನ ಮಾಹಿತಿ ತುಂಬಿರಿ

| ಸಂಸ್ಥೆಯ ಹೆಸರು | ಉದ್ಯೋಗದ ಹೆಸರು | ಸೇವೆಗೆ ಸೇರಿದ ದಿನಾಂಕ |
|---|---|---|
| | | |

ಈ ಮೇಲ್ಕಂಡ ಅಭ್ಯರ್ಥಿಯು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನಲ್ಲಿ ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸ್‌ಗೆ ನೊಂದಾಯಿಸಲು ನಮ್ಮ ಅಭ್ಯಂತರವಿರುವುದಿಲ್ಲ.

**ಮೇಲಾಧಿಕಾರಿಯ ಸಹಿ ಮತ್ತು ಮೊಹರು**

**ಸ್ವಯಂ ದೃಢೀಕರಣ**

18. ನಾನು ಮೇಲೆ ತಿಳಿಸಿರುವ ವಿವರಗಳು ಸರಿಯಾಗಿವೆಯೆಂದು ಮತ್ತು ನಿಜವೆಂದು ದೃಢೀಕರಿಸುತ್ತೇನೆ. ಸಲ್ಲಿಸಿದ ಮಾಹಿತಿ ತಪ್ಪು ಎಂದು ಕಂಡು ಬಂದಲ್ಲಿ ಕಾನೂನಿನಂತೆ ಕ್ರಮ ಕೈಗೊಳ್ಳಬಹುದು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾಲ ಕಾಲಕ್ಕೆ ಆಗುವ ಬದಲಾವಣೆಗಳಿಗೆ ಬದ್ದನಾಗಿರುತ್ತೇನೆಂದು ಘೋಷಿಸುತ್ತೇನೆ.

ಸಹಿ: ________________
(ತಂದೆ/ತಾಯಿ/ಗಂಡ/ಪೋಷಕರು)
ಸ್ಥಳ: ________________
ದಿನಾಂಕ: ________________

ಸಹಿ: ________________
(ಅಭ್ಯರ್ಥಿಯ ಸಹಿ)
ಸ್ಥಳ: ________________
ದಿನಾಂಕ: ________________